International Journal of Kannada Research
www.kannadajournal.com

**ISSN: 2454–5813**
IJKR 2017; 3(4): 170-172
© 2017 IJKR
www.kannadajournal.com
Received: 15-08-2017
Accepted: 16-09-2017

**ವಿಜಯಸಿಂಗ್ ಟಿ.ಎಂ**
ಸಂಶೋಧನಾ ವಿದ್ಯಾರ್ಥಿ, ಸಂಸ್ಕೃತ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

**Correspondence**
**ವಿಜಯಸಿಂಗ್ ಟಿ.ಎಂ**
ಸಂಶೋಧನಾ ವಿದ್ಯಾರ್ಥಿ, ಸಂಸ್ಕೃತ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

# ಕರ್ಮಯೋಗದ ಹಿರಿಮೆ

**ವಿಜಯಸಿಂಗ್ ಟಿ.ಎಂ**

ಎಲ್ಲ ಜೀವರಾಶಿಗಳ ಕ್ರಿಯೆಯ ಒಟ್ಟು ಮೊತ್ತವೇ ಪ್ರಪಂಚ. ಜೀವಿಯ ಕ್ರಿಯಾಚಟುವಟಿಕೆಯನ್ನು ವಿಶ್ಲೇಷಿಸಿದಾಗ, ಈ ಪ್ರಪಂಚದ ಸ್ವರೂಪ ತಿಳಿಯುತ್ತದೆ. ಜೀವರಾಶಿಗಳಲ್ಲಿ ಮಾನವ ಶ್ರೇಷ್ಠ. ಈ ಪ್ರಪಂಚವು ಅವನು ಬದುಕಲಿಕ್ಕಾಗಿ ಸಮಸ್ಯಾತ್ಮಕವಾಗಿ ಕಾಣಿಸುವುದರಿಂದ, ಅವನು ತನ್ನ ಜೀವನವನ್ನು ಸುಗಮಗೊಳಿಸಿಕೊಳ್ಳಲು ಪ್ರಯತ್ನಿಸುತ್ತಿರುತ್ತಾನೆ. ಅದಕ್ಕೆ ಪರಿಹಾರವನ್ನು ಕಂಡುಕೊಳ್ಳುತ್ತಾನೆ.

ಮಾನವನು ತನ್ನ ಜೀವನವನ್ನು ಸುಗಮಗೊಳಿಸಿಕೊಳ್ಳಲು, ಸುಖಪಡಲು ಒಳ್ಳೆಯ ಕಾರ್ಯ ಮಾಡಬೇಕು. ಒಳ್ಳೆಯ ಕಾರ್ಯ ಮಾಡಿದಾಗ ಪುಣ್ಯದ ಫಲವಾಗಿ ಸುಖ ಪ್ರಾಪ್ತಿಯಾದರೆ, ಪಾಪ ಕಾರ್ಯ ಮಾಡಿದಾಗ ದುಃಖ ಉಂಟಾಗುವುದು. ಈ ಪುಣ್ಯ ಅಥವಾ ಪಾಪಕಾರ್ಯ ಯಾವುದು ಎನ್ನುವುದರ ಕುರಿತು ಶಾಸ್ತ್ರಗಳ ಗ್ರಂಥಗಳೇ ಸೃಷ್ಟಿಯಾಯಿತು. ಈ ಹಲವು ಶಾಸ್ತ್ರಗ್ರಂಥಗಳ ಪೈಕಿ ಶ್ರೀಮದ್ಭಗವದ್ಗೀತೆ ಎಂಬ ಗ್ರಂಥದಲ್ಲಿ ಕರ್ಮಸಿದ್ಧಾಂತದ ಬಗೆಗೆ ಹೇಳಲಾಗಿದೆ.

ಈ ಜಗತ್ತಿನಲ್ಲಿ ನಾವು ಜೀವಿಸುವುದಕ್ಕಾಗಿ ಸ್ವಲ್ಪ ಹಣವನ್ನು ಸಂಪಾದಿಸಬೇಕು. ಜೀವನಾವಶ್ಯಕತೆಗಳಿಗನುಗುಣವಾಗಿ ಆ ಹಣವನ್ನು, ಅಂದರೆ ಮುಖ್ಯವಾಗಿ ನಮ್ಮ ಹಸಿವಿನ ತೃಷೆ ನೀಗಿಸಿಕೊಳ್ಳಲು, ನಾವು ಸಂಪಾದಿಸುತ್ತೇವೆ. ಆಹಾರದಿಂದ ಶರೀರವು ಆರೋಗ್ಯಕರವಾಗಿರುತ್ತದೆ. ಶರೀರವು ಆರೋಗ್ಯಕರವಾಗಿದ್ದರೆ ಹಣವನ್ನು ಸಂಪಾದಿಸಲು ಮಾರ್ಗವಾಗುತ್ತದೆ. ಇದು ಕರ್ಮಚಕ್ರ.

ನಾವು ನಮ್ಮ ಇಹಜೀವನದಲ್ಲಿ, ನಮಗೆ ಹಿತಕರವನ್ನುಂಟು ಮಾಡುವಂತಹದು ಯಾವುದೆಂದು ತಿಳಿಯದೆ, ನಿಶ್ಚಿತ ಗೊತ್ತು ಗುರಿಯಿಲ್ಲದೆ ಸಂಚಾರ ಮಾಡುತ್ತಿದ್ದೇವೆ. ನಮ್ಮ ಪ್ರತಿಯೊಂದು ಕಾರ್ಯವನ್ನು ಭಗವಂತನ ತೃಪ್ತಿಗಾಗಿಯೇ ಮಾಡಬೇಕು ಎಂದು ಶ್ರೀಕೃಷ್ಣನು ಸ್ಪಷ್ಟಪಡಿಸುತ್ತಾನೆ.

ಕರ್ತವ್ಯ – ಈ ಕುರಿತು ಶಾಸ್ತ್ರ, ಇತರ ಧರ್ಮಗ್ರಂಥಗಳಲ್ಲೂ ನಿಯಮಿಸಿರುವ ಕೆಲಸ. ನಾವು ಕ್ರಿಯೆ, ಪ್ರತಿಕ್ರಿಯೆ, ಕಾರ್ಯ ಮತ್ತು ಅದರ ಫಲಗಳ ಬಂಧನಗಳಿಂದ ತಪ್ಪಿಸಿಕೊಳ್ಳುವಂತಿಲ್ಲ. ಸನ್ಯಾಸಿಯಾದರೂ ಕೂಡ ತನ್ನ ಹಸಿವಿನ ಬವಣೆಯನ್ನು ನೀಗಿಸಿಕೊಳ್ಳಲು ಕೆಲಸ ಮಾಡಬೇಕಾಗುತ್ತದೆ. ಆದುದರಿಂದ ಮಾನವನು ಯಾವ ಕೆಲಸ ಮಾಡುವುದನ್ನು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ.

ಭಾರತದ ಋಷಿ ಮುನಿಗಳು ತಮ್ಮ ಆತ್ಮಸಾಕ್ಷಾತ್ಕಾರಕ್ಕೆ ಆದ್ಯತೆ ನೀಡಿದ್ದಾರೆ. ಈ ದೇಶದ ಸಂತ, ಮಹಾತ್ಮರು ತಮ್ಮ ಕಾರ್ಯದ ಜೊತೆಗೆ ಆತ್ಮ ಸಾಕ್ಷಾತ್ಕಾರಕ್ಕಾಗಿ ಶ್ರಮಿಸಿದ್ದಾರೆ. ಪಾಶ್ಚಿಮಾತ್ಯ ದೇಶಗಳಲ್ಲಿ ಎಷ್ಟೇ ಪ್ರಗತಿಯಾದರೂ ಭಾರತದ ಭವ್ಯ ಸಂಸ್ಕೃತಿಯ ಕಡೆಗೆ, ಆ ದೇಶದ ಚಿಂತಕರು ಚಿಂತಿಸುವುದನ್ನು ಕಾಣುತ್ತೇವೆ. ಸಮಾಜದಲ್ಲಿ ಅನೇಕ ಬಗೆಯ ಕರ್ಮಗಳನ್ನು ಮಾಡುವವರಿರುತ್ತಾರೆ. ಈ ಸಮಾಜದ ಜೀವನ ಸುಸೂತ್ರವಾಗಿ ಸಾಗಲು ತಮ್ಮದೇ ಆದ ಉದ್ಯೋಗದಲ್ಲಿ ತೊಡಗಿಕೊಂಡಿರುವುದನ್ನು ಕಾಣುತ್ತೇವೆ. ರೈತ, ವ್ಯಾಪಾರಿ, ಪುರೋಹಿತ, ಅಗಸ, ಚರ್ಮಕಾರ, ನೇಕಾರ, ಕಟುಕ ಇತ್ಯಾದಿ. ಇವರೆಲ್ಲರು ಸಹಜವಾಗಿ ತಮ್ಮ ಕರ್ಮದಲ್ಲಿ ತೊಡಗಿಕೊಂಡಿರುವುದನ್ನು ಕಾಣುತ್ತೇವೆ.

ಕರ್ಮ ಎನ್ನುವುದು ಸಾಮಾನ್ಯಾರ್ಥದಲ್ಲಿ ಕೆಲಸ ಎಂದಾಗುತ್ತದೆ. ಅದು ಶಾಸ್ತ್ರ ಹೇಳಿದ ನಿತ್ಯ ಕರ್ಮ, ಯೋಗವೂ ಆಗಬಹುದು. ಕಾಮಿತಾರ್ಥ ಪೂರೈಸುವ ಯಜ್ಞವಾಗಬಹುದು. ಸಮಾಜಕ್ಕೆ ಹಿತವನ್ನುಂಟು ಮಾಡುವ ಗಿಡಗಳನ್ನು ನೆಡುವ ಕರ್ಮವಾಗಬಹುದು. ಇವುಗಳೆಲ್ಲ ಕರ್ಮವೇ ಆದರೂ ಮನಸ್ಸನ್ನು ಶುದ್ಧಗೊಳಿಸುವ ಕರ್ಮವೇ ಇಲ್ಲಿ ಮುಖ್ಯ.

ತನ್ನ ಶ್ರೇಯೋಭಿವೃದ್ಧಿಗಾಗಿ, ಲೋಕಕ್ಕೆ ಒಳಿತಾಗಲೆಂದು ಶಾಸ್ತ್ರದಲ್ಲಿ ವಿಧಿಸಿದ ಕರ್ಮಗಳೇ ಕರ್ಮಗಳಾಗಿವೆ. ಶಾಸ್ತ್ರದಲ್ಲಿ ಸ್ಪಷ್ಟವಾಗಿ ತಿಳಿಸದಿದ್ದರೂ ಶಾಸ್ತ್ರದಲ್ಲಿ ಹೇಳಿದ ಕರ್ಮಗಳಿಗೆ ಅನುಕೂಲವಾಗಿದ್ದರೆ ಅವು ಕರ್ಮಗಳೆನಿಸುತ್ತವೆ. ಇವುಗಳ ಆಚರಣೆಯಿಂದ ಪುಣ್ಯ ಪ್ರಾಪ್ತಿ, ಮನಶ್ಶಾಂತಿ ದೊರಕುತ್ತದೆ. ಶಾಸ್ತ್ರ ನಿರಾಕರಿಸಿದ ಕರ್ಮಗಳು ವಿಕರ್ಮಗಳು.

ಇದರ ಆಚರಣೆಯಿಂದ ಪಾಪವೇ ಸಂಭವಿಸುವುದು. ಅಕರ್ಮ ಎಂದರೆ ಕರ್ಮವೇ ಇಲ್ಲದ ಅವಸ್ಥೆ.

ಹಿಂದೆ ತಿಳಿಸಿದಂತೆ ಶಾಸ್ತ್ರ ಹೇಳಿದ ನಿತ್ಯಕರ್ಮಗಳನ್ನು ಮಾಡಬೇಕೆಂದು ಶಾಸ್ತ್ರಗಳು ನಮಗೆ ಬೋಧಿಸುತ್ತವೆ. ಯೋಗ, ಅಧ್ಯಯನ ಇತ್ಯಾದಿ. ಯಾವುದೇ ಫಲಾಪೇಕ್ಷೆಯಿಂದ ಮಾಡುವುದಲ್ಲ. ನಮ್ಮ ಮನಸ್ಸನ್ನು ಪರಿಶುದ್ಧಗೊಳಿಸಿಕೊಳ್ಳುವುದೇ ಈ ಕರ್ಮ ಮಾಡುವ ಉದ್ದೇಶವಾಗಿದೆ.

ನಾವು ಯಾವಾಗ ಕರ್ಮ ಮಾಡುತ್ತೇವೆ? "ನ ಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯ ಕರ್ಮಕೃತ್" ಯಾವನೂ ಎಂದಿಗೂ ಒಂದು ಕ್ಷಣಮಾತ್ರವಾದರೂ ಕರ್ಮವನ್ನು ಮಾಡದೆ ಇರಲಾರನು. – ಗೀ:೩–೫. ಕರ್ಮವು ನಿರಂತರವಾದದ್ದು. ಅದರಲ್ಲಿ ತೊಡಗಿಕೊಳ್ಳದ ಜೀವಿಯೇ ಇಲ್ಲ.

ಹೀಗೆ ಎಲ್ಲೆಡೆ ವ್ಯಾಪ್ತವಾದ ಈ ಕರ್ಮದ ಲಕ್ಷಣಗಳು ಏನು? "--- ಗಹನಾ ಕರ್ಮಣೋ ಗತಿಃ" ಕರ್ಮದ ಗತಿಯು ಅರಿತುಕೊಳ್ಳಲು ಕಷ್ಟಕರ. – ಗೀ:೪–೧೭. ಈ ಪ್ರಪಂಚದಲ್ಲಿ ನಾವು ಆಸಕ್ತಿಯಿಂದ ಎಲ್ಲೆಲ್ಲೂ ಓಡಾಡುತ್ತಿರುತ್ತೇವೆ. ಎಲ್ಲೆಡೆ ಗಾಢಾಂದಕಾರ. ಕತ್ತಲೆ ಎಂದಾಗ ಚಡಪಡಿಸುತ್ತಿರುತ್ತೇವೆ. ಯಾವ ಕ್ಷಣದಲ್ಲಿ, ಯಾವ ಕರ್ಮ ನಮಗೆ ಎದುರಾಗುತ್ತದೆ. ಅದನ್ನು ಮಾಡಬೇಕೆ ಅಥವಾ ಬಿಡಬೇಕೆ ಏನೂ ತೋಚದು. ಹೀಗಿದ್ದರೂ ಎಲ್ಲವನ್ನು ತಿಳಿದವರಂತೆ ಸಾಗುತ್ತಿದ್ದೇವೆ. ಆದುದರಿಂದ ವೇದ ಋಷಿ ಹೇಳಿರುವದು – "ತಮಸೋ ಮಾ ಜ್ಯೋತಿರ್ಗಮಯ" ಅಂದರೆ ಈ ಕತ್ತಲಿನಿಂದ ಬೆಳಕಿಗೆ ನನ್ನನ್ನು ನಡೆಸು ಎಂದು.

> ನೇಹಾಭಿಕ್ರಮನಾಶೋಽಸ್ತಿ ಪ್ರತ್ಯವಾಯೋ ನ ವಿದ್ಯತೇ ।
> ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್ ॥ ಗೀ:೨–೪೦

ಈ ಕರ್ಮಭೂಮಿಯಲ್ಲಿ ಈ ಧರ್ಮದ ಸ್ವಲ್ಪ ಆಚರಣೆ ಮಾಡುವುದರಿಂದಲೂ ಮಹಾಭಯದಿಂದ ಜನರನ್ನು ಕಾಪಾಡುತ್ತದೆ ಎಂದು ಕರ್ಮಯೋಗದ ಹಿರಿಮೆಯನ್ನು ಈ ಶ್ಲೋಕದ ಮೂಲಕ ಕಾಣುತ್ತೇವೆ. ಅಭಿಕ್ರಮನಾಶ ಎಂದರೆ ಕರ್ಮದಲ್ಲಿ ತೊಡಗಿದ ಆರಂಭದ ಭಾಗವು ಕಾರಣಾಂತರಗಳಿಂದ ನಂತರ ನಾಶಹೊಂದುತ್ತದೆ. ಕಟ್ಟಡ ಕಟ್ಟಿ ಅದರ ಮೇಲ್ಛಾವಣಿಯನ್ನು ಮುಚ್ಚದೆ, ರಕ್ಷಿಸದೇ ಹೋದರೆ ವಿಪರೀತ ಮಳೆಯಿಂದ ಕಟ್ಟಡವು ಕುಸಿದು ಹೋಗುತ್ತದೆ ಅಥವಾ ಮಳೆಯಿಂದ ಸೋರಲು ಪ್ರಾರಂಭಿಸುತ್ತದೆ. ನಾವು ಮಾಡಿದ ಕರ್ಮ ತಪ್ಪಾಗಿ ಅದು ವಿಪರೀತ ಪರಿಣಾಮ ತೋರುವ ಸಾಧ್ಯತೆ ಇದೆ. ಸಹಜವಾಗಿ ನಾವು ಮಾಡುವಂತಹ ಎಲ್ಲ ಕರ್ಮಗಳಿಗೂ ಈ ಮೇಲಿನ ಎರಡು ದೋಷಗಳು ಉಂಟಾಗಬಹುದು. ಆದ್ದರಿಂದ ಭಗವಂತನು ತಾನು ತಿಳಿಸುವ ಯೋಗದ ರೀತಿಗನುಗುಣವಾಗಿ ಮಾಡುವ ಕರ್ಮಗಳಿಗೆ ಮಾತ್ರ ಈ ಎರಡು ದೋಷಗಳುಂಟಾಗಲಾರವು ಎಂದು ಹೇಳುತ್ತಾನೆ.

ಕರ್ಮಯೋಗದ ಗುರಿ ಏನು? ಸಕಲ ಐಶ್ವರ್ಯಾದಿಗಳನ್ನು ಸಂಪಾದಿಸುವುದಲ್ಲ. ಮನಸ್ಸಿನ ಶುದ್ಧೀಕರಣವೇ ಕರ್ಮಯೋಗದ ಗುರಿ. ಅಲ್ಲದೆ ಕರ್ಮಯೋಗವನ್ನು ಸಂಪೂರ್ಣವಾಗಿ ಆಚರಣೆ ಮಾಡಲು ಮುಕ್ತನಿಗೆ ಮಾತ್ರ ಸಾಧ್ಯವಾಗುತ್ತದೆ.

> ವ್ಯವಸಾಯಾತ್ಮಿಕಾ ಬುದ್ಧಿರೇಕೇಹ ಕುರುನಂದನ ।
> ಬಹುಶಾಖಾಹ್ಯನಂತಾಶ್ಚ ಬುದ್ಧಯೋವ್ಯಸಾಯಿನಾಮ್ ॥ ಗೀ:೨–೪೧

ಅರ್ಜುನ, ಇಲ್ಲಿ ನಿಶ್ಚಯಿಸುವ ಬುದ್ಧಿಯು ಏಕನಿಷ್ಠೆಯನ್ನು ಹೊಂದಿರುತ್ತದೆ. ನಿಶ್ಚಯಿಸದವರ ಬುದ್ಧಿಗಳು ಅನೇಕ ಶಾಖೆಗಳನ್ನು ಹೊಂದಿ, ಅಪರಿಮಿತವಾಗಿರುತ್ತದೆ.

ಕರ್ಮಯೋಗ ಎಂಬುದು ಆಸೆಯಿರದೆ ಕರ್ಮ ಮಾಡುವುದಾಗಿದೆ. ಯೋಗದ ದ್ವಾರ ಕರ್ಮ ಮಾಡಿದಾಗ ಕರ್ಮ ಮಾಡುವಲ್ಲಿ ಮಾತ್ರವೇ ಬುದ್ಧಿಯು ನಿಷ್ಠೆಯುಳ್ಳದ್ದಾಗಿರುತ್ತದೆ. ಯೋಗವಿಲ್ಲದೆ ಸರಳ ಮಾನವರಂತೆ ಕರ್ಮ ಮಾಡಿದಾಗ ಅವರ ಬುದ್ಧಿಯು ಏಕನಿಷ್ಠೆ ಹೊಂದಲಾರದು. ಈ ಕರ್ಮವನ್ನು ಮಾಡಬೇಕೆ ಅಥವಾ ಹೀಗೆ ಮಾಡಿದರೆ ಪ್ರಯೋಜನವಾದೀತೇ, ಈ ಕರ್ಮ ಆಚರಣೆ ಮಾಡಲು ಏನೇನು ತೊಂದರೆಗಳು ಬರಬಹುದು ಇತ್ಯಾದಿ. ಹೀಗೆ ಕರ್ಮ ಫಲಾಪೇಕ್ಷೆಯಿಂದ ಕರ್ಮ ಮಾಡುವಂತಹವರ ಬುದ್ಧಿಯು ಸಂದರ್ಭಕ್ಕೆ ತಕ್ಕಂತೆ ಚಂಚಲಗೊಂಡು ನಾನಾ ಕಡೆ ಹರಿದಾಡುತ್ತಿರುತ್ತದೆ.

ಯೋಗದ ದ್ವಾರ ಕರ್ಮ ಮಾಡಿದಾಗ, ಹೀಗಾಗದೆ ಬುದ್ಧಿಯು ನಿಶ್ಚಲಗೊಂಡು ಒಂದೇ ಸ್ಥಿತಿಯನ್ನು ಪಡೆಯುತ್ತದೆ ಎಂದು ಭಗವಂತನು ಹೇಳುತ್ತಾನೆ.

> ಕುರ್ವನ್ನೇವೇಹ ಕರ್ಮಾಣಿ ಜಿಜೀವಿಷೇಚ್ಛತಂ ಸಮಾ ಃ ।
> ಏವಂ ತ್ವಯಿ ನಾನ್ಯಥೇತೋಽಸ್ತಿ ನ ಕರ್ಮ ಲಿಪ್ಯತೇ ನರೇ॥

ಗೀತೆಯು ಕರ್ಮ ಮಾಡುವಲ್ಲಿ ಶುದ್ಧ ಮನಸ್ಸು ಅವಶ್ಯಕ ಎಂದು ಹೇಳುತ್ತದೆ. ಅಲ್ಲದೆ ಹತ್ತು ಉಪನಿಷತ್ತುಗಳಲ್ಲಿ ಒಂದಾದ ಈಶಾವಾಶ್ಯೋಪನಿಷತ್ತಿನಲ್ಲಿ ಮಾನವನು ಕರ್ಮ ಮಾಡುತ್ತಲೇ ನೂರು ವರ್ಷ ಬಾಳಬೇಕು ಎಂಬ ಜೀವನದ ಸಂದೇಶವನ್ನು ತಿಳಿಸುತ್ತದೆ.

ಶಾಸ್ತ್ರ ಹೇಳಿದ ಕರ್ಮ ಮಾಡುತ್ತ ಈ ಪ್ರಪಂಚದಲ್ಲಿ ನೂರು ವರ್ಷಗಳ ಕಾಲ ಬಾಳಬೇಕು. ಈ ರೀತಿ ಮಾಡಿದ ಕರ್ಮದಿಂದ ಮಾನವನು ಅದರಿಂದ ಲಿಪ್ತನಾಗಲಾರನು. ಕರ್ಮದ ಬಂಧನದಿಂದಲೂ ಬಿಡಿಸಿಕೊಳ್ಳುವ ಬೇರೆ ಮಾರ್ಗವಿರದು.

ಈ ಉಪನಿಷತ್ತಿನ ಮಂತ್ರದಲ್ಲಿ ಬದುಕಿನ ನಿಜವಾದ ಧ್ಯೇಯವೇನೆಂದು ಅರಿಯಬಹುದಾಗಿದೆ. ಈ ಬದುಕಿನ ಬಗೆಗೆ ನಿರಾಶೆ ಬೇಡ. ದಿನ ನಿತ್ಯ ಅತ್ತು ಕರೆದೂ ಘೋರ ಯಾತನೆಯನ್ನು ಅನುಭವಿಸಬೇಡಿ. ಆ ಕಾರ್ಯ ನಮಗೆ ದೊರಕದಾಯಿತಲ್ಲ ಎಂದು ಚಿಂತಿಸಿ ವ್ಯಥೆಪಡಬೇಡಿ. ಬದುಕಿನ ಅರ್ಥವನ್ನು ತಿಳಿದುಕೊಂಡು ಮುಂದೆ ಬರುವ ಯಾವುದೇ ಕಾರ್ಯಕ್ಕಾಗಿ ಸಿದ್ಧರಾಗಿ.

ಯಾವುದೇ ಕಾರ್ಯ ಕೀಳಲ್ಲ. ಕಾರ್ಯಗಳು ಜಾತಿಗಳಿಗನುಗುಣವಾಗಿ ಭಿನ್ನ ಭಿನ್ನವಾಗಿವೆ. ಇವುಗಳೆಲ್ಲದರ ಗುರಿ ಮನಸ್ಸಿನ ನೈರ್ಮಲ್ಯ. ಆದ್ದರಿಂದ ಸಾಧನೆ ಮಾಡುವವರು ಯಾವುದೇ ಕರ್ಮಗಳಲ್ಲಿ ತೊಡಗಿಕೊಂಡಿರಲಿ, ಬೇರೆ ಸಂಪ್ರದಾಯದವರ ಕರ್ಮಗಳನ್ನು ಜರಿಯಬಾರದು. ಲಿಂಗಪೂಜೆ, ಈಶ್ವರ ಭಜನೆ ಅಥವಾ ವಿಗ್ರಹಾರಾಧನೆ ಮಾಡಲಿ. ಇವೆಲ್ಲ ಪವಿತ್ರ ಕರ್ಮಗಳೆನಿಸಿವೆ.

ಸತ್ಯವನ್ನೇ ಹೇಳಬೇಕು, ಧರ್ಮದಂತೆ ನಡೆಯಬೇಕು, ಶಾಸ್ತ್ರ ವಿರುದ್ಧ ಕರ್ಮಗಳನ್ನು ಮಾಡಕೂಡದು ಎಂದು ತೈತ್ತರೀ ಉಪನಿಷತ್ತಿನಲ್ಲಿ ಕರ್ಮಗಳ ಬಗೆಯನ್ನು ಕಾಣುತ್ತೇವೆ. ತಾನು ಶ್ರಮವಹಿಸಿ ದುಡಿದ ಕಾಯಕದಲ್ಲಿ ಪವಿತ್ರತೆ ತುಂಬಿರುತ್ತದೆ. ವೀರಶೈವ ಸಿದ್ಧಾಂತದಲ್ಲಿ ಈ ತೆರನಾಗಿ ಮಾಡಿದ ದುಡಿಮೆಗೆ ಕಾಯಕ ಎಂದು ಹೆಸರಿಸಿದ್ದಾರೆ. ಈ ಪ್ರಪಂಚವು ಕರ್ತಾರನ ಕಮ್ಮಟವಾಗಿರುವುದು. ಕಾಯಕ ನಿರತರು ಮಾತ್ರ ಇಲ್ಲಿ ಸುಖದಿಂದ ಬಾಳಬಲ್ಲರು.

ಈ ದೇಶದಲ್ಲಿ ಅನೇಕ ಶ್ರಮಜೀವಿಗಳು ಕಷ್ಟಪಟ್ಟು ದುಡಿದು ಬಂದುದರಲ್ಲಿಯೇ ಜೀವನವನ್ನು ಸಾಗಿಸುತ್ತಿದ್ದಾರೆ. ಈ ದೇಶದ

ಪ್ರಗತಿ ತರುಣ ಜನಾಂಗದಿಂದ ಸಾಧ್ಯವಿದೆ. ಆದರೆ ತರುಣ ಜನಾಂಗದಲ್ಲಿ ಎರಡು ರೀತಿಯ ಜನರಿರುವುದನ್ನು ಕಾಣುತ್ತೇವೆ. ಒಂದೆಡೆ ಕೆಲವು ತರುಣರು ಹಣವನ್ನು ಮನಬಂದಂತೆ ಬಳಸಿ, ಏನೂ ಕಾರ್ಯ ಮಾಡದೆ ಜೀವನವನ್ನು ವ್ಯರ್ಥವಾಗಿ ಕಳೆಯುವುದನ್ನು ಕಾಣುತ್ತೇವೆ. ಅಲ್ಲದೆ, ಇನ್ನೊಂದೆಡೆ ಕೆಲವು ತರುಣರು ಬದುಕಿನಲ್ಲಿ ಉತ್ಸಾಹದಿಂದ ಕಾರ್ಯೋನ್ಮುಖರಾಗಿ, ಕಾತರರಾಗಿರುವವರನ್ನು ಕಾಣುತ್ತೇವೆ, ಆದ್ದರಿಂದ ತರುಣರು ಜೀವನದಲ್ಲಿ ಉತ್ಸಾಹ ಕಳೆದುಕೊಳ್ಳದೆ ಗೀತೆ, ಉಪನಿಷತ್ತುಗಳಲ್ಲಿ ಹೇಳಿದ ಕರ್ಮಯೋಗದ ಹಿರಿಮೆಯನ್ನು ಮನನ ಮಾಡಿಕೊಂಡು, ಮುಂದೆ ಯಾವುದೇ ಕರ್ಮ ಮಾಡುವಲ್ಲಿ ಸಿದ್ಧತೆ ನಡೆಸಿದಾಗ ಅದರಲ್ಲಿ ಸಫಲರಾಗುವರಲ್ಲದೆ, ತಮ್ಮ ಜೀವನದಲ್ಲೂ ಕೂಡ ಯಶಸ್ಸನ್ನು ಕಾಣಲು ಖಂಡಿತ ಸಾಧ್ಯವಿದೆ.